# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 15.12.2016

## ಅಧಿಸೂಚನೆ

ವಿಷಯ: ಆನ್‌ಲೈನ್ ಆಪ್ಟಿಟ್ಯೂಡ್ ಪರೀಕ್ಷೆಯ (TAT) ಇ–ಅಡ್ಮಿಟ್ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವ ಕುರಿತು.

ಉಲ್ಲೇಖ:
1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 08.09.2016.
2. ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಪರಿಗಣಿಸದಿರುವ ಬಗ್ಗೆ ಹೊರಡಿಸಲಾಗಿದ್ದ ಅಧಿಸೂಚನೆ ಸಂಖ್ಯೆ: ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 20.10.2016
3. ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲು ಹೊರಡಿಸಿದ ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 18.11.2016.
4. ಸ್ಪರ್ಧಾತ್ಮಕ ಪರೀಕ್ಷೆಯನ್ನು ಮುಂದೂಡಿ ಹೊರಡಿಸಿರುವ ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 22.11.2016.
5. ಕನ್ನಡ ಭಾಷಾ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳನ್ನು ಪ್ರಕಟಿಸಿ ಹೊರಡಿಸಿದ ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016–17 ದಿನಾಂಕ: 06.12.2016

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿವಿಧ ಎಸ್ಕಾಂಗಳಲ್ಲಿ **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)** ಮತ್ತು **ಸಹಾಯಕ ಇಂಜಿನಿಯರ್ (ಸಿವಿಲ್)** ಹುದ್ದೆಗಳ ನೇಮಕಾತಿಗೆ **ಆನ್‌ಲೈನ್ ಆಪ್ಟಿಟ್ಯೂಡ್ ಟೆಸ್ಟ್** ಅನ್ನು **ದಿನಾಂಕ: 24.12.2016** ರಂದು ರಾಜ್ಯಾದ್ಯಂತ ವಿವಿಧ ಸ್ಥಳಗಳಾದ ಬೆಂಗಳೂರು, ಮೈಸೂರು, ಮದ್ದೂರು, ಮಂಡ್ಯ, ಶಿವಮೊಗ್ಗ, ಮಂಗಳೂರು, ದಾವಣಗೆರೆ, ರಾಣೆಬೆನ್ನೂರು, ಹುಬ್ಬಳ್ಳಿ–ಧಾರವಾಡ, ಗದಗ, ಬೆಳಗಾವಿ, ಹಳಿಯಾಳ, ಬಳ್ಳಾರಿ, ವಿಜಯಾಪುರ, ಕಲಬುರ್ಗಿಗಳಲ್ಲಿ ನಡೆಸಲಾಗುವುದು.

| | | |
|---|---|---|
| **1.** | **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)** | **ಬೆಳಗ್ಗೆ 10:00 ರಿಂದ 12:00 ರವರೆಗೆ** |
| **2.** | **ಸಹಾಯಕ ಇಂಜಿನಿಯರ್(ಸಿವಿಲ್)** | **ಮಧ್ಯಾಹ್ನ 2:00 ರಿಂದ 4:00 ರವರೆಗೆ** |

ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸಿರುವ ಅಭ್ಯರ್ಥಿಗಳು, ವಿಕಲಚೇತನ ಅಭ್ಯರ್ಥಿಗಳು ಹಾಗೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಮಾತ್ರ ಆನ್‌ಲೈನ್ ಆಪ್ಟಿಟ್ಯೂಡ್ ಟೆಸ್ಟ್‌ಗೆ ಹಾಜರಾಗಲು ಅರ್ಹರಾಗಿರುತ್ತಾರೆ. ಒಂದೇ ಹುದ್ದೆಗೆ, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಮತ್ತು ಒಂದಕ್ಕಿಂತ ಹೆಚ್ಚು ಕಂಪನಿಗಳಿಗೆ ಕೆಲವು ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿಗಳನ್ನು ತೆಗೆದುಹಾಕಲಾಗಿದೆ.

ದಿನಾಂಕ: **16.12.2016** ರ ನಂತರ ಇ–ಅಡ್ಮಿಟ್ ಪತ್ರಗಳನ್ನು **(TAT)** ಕವಿಪ್ರನಿನಿ ಮತ್ತು ಎಸ್ಕಾಂಗಳ ವೆಬ್‌ಸೈಟ್ **www.kptcl.com www.bescom.org, www.cescmysore.org, www.hescom.co.in, www.gescom.in** ಗಳಲ್ಲಿ ಲಭ್ಯಪಡಿಸಲಾಗುವುದು. ಅರ್ಹ ಅಭ್ಯರ್ಥಿಗಳು ತಿಳಿಸಲಾದ ವೆಬ್‌ಸೈಟ್‌ಗಳಿಗೆ ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮದಿನಾಂಕದೊಂದಿಗೆ ಲಾಗ್‌ಅನ್ ಮಾಡುವುದರೊಂದಿಗೆ ಇ–ಅಡ್ಮಿಟ್ **(TAT)** ಮುದ್ರಿತ ಪ್ರತಿಯನ್ನು ಪಡೆದುಕೊಳ್ಳಬಹುದಾಗಿದೆ. ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳಲ್ಲಿ ಆಪ್ಟಿಟ್ಯೂಡ್ ಟೆಸ್ಟ್‌ಗೆ ಹಾಜರಾಗುವ ಅಭ್ಯರ್ಥಿಗಳು ಇ–ಅಡ್ಮಿಟ್ ಪತ್ರದ (TAT) ಮುದ್ರಿತ ಪ್ರತಿಯನ್ನು (2 ಪ್ರತಿಗಳು) ಹಾಜರುಪಡಿಸತಕ್ಕದ್ದು. ಅಭ್ಯರ್ಥಿಗಳು ಪರೀಕ್ಷಾ ಸ್ಥಳ/ಕೇಂದ್ರಗಳ ಬದಲಾವಣೆ ಬಯಸಿ ಸಲ್ಲಿಸುವ ಯಾವುದೇ ಮನವಿ ಅಥವಾ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ. ಆಪ್ಟಿಟ್ಯೂಡ್ ಟೆಸ್ಟ್‌ಗೆ ಯಾವುದೇ ಮುದ್ರಿತ ಅಡ್ಮಿಟ್ ಪತ್ರಗಳನ್ನು ಕವಿಪ್ರನಿನಿ ಮತ್ತು ಎಸ್ಕಾಂಗಳ ವತಿಯಿಂದ ಪ್ರತ್ಯೇಕವಾಗಿ ಅಂಚೆ ಮೂಲಕ ರವಾನಿಸಲಾಗುವುದಿಲ್ಲ.

**ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್), ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ ನಡೆಸಲಾಗುವ ಆನ್‌ಲೈನ್ ಆಪ್ಟಿಟ್ಯೂಡ್ ಪರೀಕ್ಷೆಯ ದಿನಾಂಕಗಳನ್ನು ನಂತರದ ದಿನಗಳಲ್ಲಿ ತಿಳಿಸಲಾಗುವುದು.**

ಇ–ಅಡ್ಮಿಟ್ ಪತ್ರವನ್ನು (TAT) ಪಡೆದುಕೊಳ್ಳುವ ಸಂದರ್ಭದಲ್ಲಿ ತೊಂದರೆ ಉಂಟಾದಲ್ಲಿ, **ದಿನಾಂಕ: 23.12.2016** ರ ಒಳಗೆ ಕಚೇರಿಯ ಕೆಲಸದ ವೇಳೆಯಲ್ಲಿ ಈ ಕೆಳಕಂಡ ಸಹಾಯವಾಣಿಗಳನ್ನು ಸಂಪರ್ಕಿಸಬಹುದಾಗಿದೆ.

| | |
|---|---|
| **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ)** | 080–22211527 Ext: 3672, 3789 |
| **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ)** | 080–22085061 |
| **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)** | 0821–2343384 |
| **ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ)** | 0836–2223867, 0836–2223865 |
| **ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ)** | 08472–256647, 08472–239004 |

**ಸಹಿ/– ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ),**
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

Page No 02 16/12 Kannada Prabha

ಹೆಚ್ಚು ನಿಯಮ ಉಲ್ಲಂಘಿಸಿದ ಕಟ್ಟಡಗಳನ್ನು ಏನು ಮಾಡಬೇಕೆಂಬ ಪ್ರಶ್ನೆ ಪಾಲಿಕೆ ಎದುರಿಗಿದೆ। ನಗರದ ಭಾಗಶಃ ಕಟ್ಟಡ ನಿರ್ಮಾಣ ಅಕ್ರಮ

# ಮಿತಿಮೀರಿದ ಅಕ್ರಮದ ಸಕ್ರಮ ಹೇಗೆ?

• **ವೆಂ ಸುನೀಲ್‌ಕುಮಾರ್** ಬೆಂಗಳೂರು

ಅಕ್ರಮ - ಸಕ್ರಮ ಯೋಜನೆ ಜಾರಿಗೊಳಿಸಲು ಬಿಬಿಎಂಪಿಯೇನೋ ಉತ್ಸುಕವಾಗಿದೆ. ಆದರೆ, ಹೆಚ್ಚಿನ ಪ್ರಮಾಣದಲ್ಲಿ ನಿಯಮ ಉಲ್ಲಂಘನೆ ಮಾಡಿರುವ ಕಟ್ಟಡಗಳ ವಿರುದ್ಧ ಪಾಲಿಕೆ ಯಾವ ರೀತಿಯ ಕ್ರಮಕ್ಕೆ ಮುಂದಾಗಲಿದೆ ಎಂಬ ಪ್ರಶ್ನೆ ಸದ್ಯ ಎದುರಾಗಿದೆ.

ಸರ್ಕಾರ ಹೊರಡಿಸಿರುವ ಅಧಿಸೂಚನೆಯಂತೆ ವಸತಿ ಕಟ್ಟಡಗಳಿಗೆ ಶೇ.50ರಷ್ಟು ಹಾಗೂ ವಾಣಿಜ್ಯ ಕಟ್ಟಡಗಳು ಶೇ.25ರಷ್ಟು ಉಲ್ಲಂಘನೆಯಾಗಿದ್ದರೆ ಮಾತ್ರ ಸಕ್ರಮಗೊಳಿಸಲು ಅವಕಾಶವಿದೆ. ಆದರೆ, ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಿಯಮ ಉಲ್ಲಂಘಟನೆಯಾಗಿದ್ದರೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಬಗ್ಗೆ ಮಾಹಿತಿಯಿಲ್ಲ. ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿದ್ದರೆ ಅಂತಹ ಕಟ್ಟಡಗಳನ್ನು ತೆರವುಗೊಳಿಸಲು ಅವಕಾಶವಿದೆ. ಈಗಾಗಲೇ ರಾಜಕಾಲುವೆ ಒತ್ತುವರಿ ವಿಚಾರದಲ್ಲಿ ಮನೆಗಳನ್ನು ತೆರವುಗೊಳಿಸಿ ಸಾರ್ವಜನಿಕರ ಕೋಪಕ್ಕೆ ಕಾರಣವಾಗಿರುವ ಬಿಬಿಎಂಪಿ ಮನೆಯಗಳನ್ನು ತೆರವುಗೊಳಿಸಲು ಮುಂದಾಗುವುದೇ ಎಂಬ ಅನುಮಾನಗಳು ಈಗ ವ್ಯಕ್ತವಾಗುತ್ತಿವೆ.

ನಗರ ವ್ಯಾಪ್ತಿಯ ಅಕ್ರಮ ಕಟ್ಟಡಗಳ ಮಾಹಿತಿ ಪಾಲಿಕೆಯ ಬಳಿಯಿಲ್ಲ. ಸಕ್ರಮಗೊಳಿಸುವಂತೆ ಪಾಲಿಕೆಗೆ ಬರುವ ಅರ್ಜಿಗಳಿಂದ ಮಾತ್ರ ಪೂರ್ಣ ಮಾಹಿತಿ ದೊರೆಯಲಿದೆ. ಅದನ್ನು ಆಧಾರಿಸಿ ಪಾಲಿಕೆ ಯೋಜನೆ ರೂಪಿಸುವ ಸಾಧ್ಯತೆಯಿದೆ. ಇದರೊಂದಿಗೆ ಅಕ್ರಮ-ಸಕ್ರಮದ ಕುರಿತು ಸಾರ್ವಜನಿಕರಲ್ಲಿ ತೀವ್ರ ಗೊಂದಲವಿದ್ದು, ಅವರಲ್ಲಿ ಜಾಗೃತಿ ಮೂಡಿಸುವ ಮೂಲಕ ಸಕ್ರಮಕ್ಕೆ ಮುಂದಾಗುವಂತೆ ಪಾಲಿಕೆಯ ಅಧಿಕಾರಿಗಳು ಕಾರ್ಯಕ್ರಮಗಳನ್ನು ರೂಪಿಸುವರೇ ಎಂಬುದನ್ನು ಕಾದು ನೋಡಬೇಕಿದೆ.

FILE PIC



**ಫೆಬ್ರವರಿಯಿಂದ ಪಾಲಿಕೆ ನಗರದ ಪ್ರತಿ ಆಸ್ತಿಯ ಸರ್ವೆ ನಡೆಸಲಿದೆ. ಸರ್ವೆ ನಂತರ ಎಷ್ಟು ಕಟ್ಟಡಗಳ ನಿಯಮ ಉಲ್ಲಂಘಟನೆ ಪ್ರಮಾಣ ತಿಳಿಯಲಿದೆ. ಅಂಥ ಕಟ್ಟಡಗಳ ಮಾಲೀಕರ ವಿರುದ್ಧ ಕ್ರಮಕೈಗೊಳ್ಳಲಾಗುವುದು**

• **ಮಂಜುನಾಥ ಪ್ರಸಾದ್** ಬಿಬಿಎಂಪಿ ಆಯುಕ್ತ

**ಅಕ್ರಮ-ಸಕ್ರಮಕ್ಕೆ ಸಂಬಂಧಿಸಿದ ನಿಯಮಗಳು ಹಾಗೂ ದರ ಪಟ್ಟಿಯನ್ನು ಶೀಘ್ರದಲ್ಲಿ ಹೊರಡಿಸಲಾಗುವುದು. ಸಕ್ರಮಕ್ಕೆ ಅರ್ಹವಲ್ಲದ ಕಟ್ಟಡಗಳ ವಿರುದ್ಧ ಕಾನೂನು ಪ್ರಕಾರ ಕ್ರಮಕೈಗೊಳ್ಳಲಾಗುವುದು.**

• **ಕೆ ಜೆ ಜಾರ್ಜ್** ಬೆಂಗಳೂರು ಅಭಿವೃದ್ಧಿ ಸಚಿವ

| ವರ್ಗ | ಉಲ್ಲಂಘನೆ | ಸಕ್ರಮದ ಮಿತಿ | ಶುಲ್ಕ |
|---|---|---|---|
| ವಸತಿ | ಸೆಟ್‌ಬ್ಯಾಕ್ | ಶೇ.25ರವರೆಗೆ | ಶೇ.6 |
| | | ಶೇ.25 ರಿಂದ ಶೇ.50 | ಶೇ.8 |
| ವಸತಿ | ಎಫ್‌ಎಆರ್ | ಶೇ.25ರವರೆಗೆ | ಶೇ.6 |
| | | ಶೇ.25ರಿಂದ ಶೇ.50 | ಶೇ.8 |
| ವಸತಿಯೇತರ | ಸೆಟ್‌ಬ್ಯಾಕ್ | ಶೇ.12.5ರವರೆಗೆ | ಶೇ.20 |
| | | ಶೇ.12.5 ರಿಂದ ಶೇ.25 | ಶೇ.35 |
| ವಸತಿಯೇತರ | ಎಫ್‌ಎಆರ್ | ಶೇ.12.5ರವರೆಗೆ | ಶೇ.20 |
| | | ಶೇ.12.5 ರಿಂದ ಶೇ.25 | ಶೇ.36 |

ಶುಲ್ಕ: ಮಾರ್ಗಸೂಚಿ ಮೌಲ್ಯಕ್ಕನುಗುಣವಾಗಿ
ಸೆಟ್‌ಬ್ಯಾಕ್: ಕಟ್ಟಡದ ಸುತ್ತಲು ಮತ್ತು ಕಟ್ಟಡದಿಂದ ಕಟ್ಟಡದ ನಡುವೆ ಇರಬೇಕಾದ ಸ್ಥಳಾವಕಾಶ
ಎಫ್‌ಎಆರ್: ಫ್ಲೋರ್ ಏರಿಯಾ ರೇಷ್ಯೋ

**ಅಕ್ರಮವಾಗಿ ಉಳಿಯುವ ಕಟ್ಟಡಗಳೇ ಹೆಚ್ಚು:** ನಗರದಲ್ಲಿ ಅಕ್ರಮ-ಸಕ್ರಮ ಜಾರಿಗೆ ತರುವ ಮುನ್ನ 2012ರಲ್ಲಿ 400 ಕಟ್ಟಡಗಳನ್ನು ಪ್ರಾಯೋಗಿಕವಾಗಿ ಸರ್ವೆ ಮಾಡಲಾಗಿತ್ತು. ಸರ್ವೆ ಮಾಡಲಾದ ಎಲ್ಲ ಕಟ್ಟಡಗಳು ನಿಯಮಗಳನ್ನು ಉಲ್ಲಂಘಿಸಿರುವ ಅಂಶ ಬೆಳಕಿಗೆ ಬಂದಿತ್ತು. 400 ಕಟ್ಟಡಗಳ ಪೈಕಿ 394 ಕಟ್ಟಡಗಳು ಸಕ್ರಮದ ವ್ಯಾಪ್ತಿಗೆ ಬರುವುದಿಲ್ಲ ಎಂದು ವರದಿಯನ್ನು ಅಧಿಕಾರಿಗಳು ಸಲ್ಲಿಕೆ ಮಾಡಿದ್ದರು. ಪಾಲಿಕೆಯ ಅಧಿಕಾರಿಗಳು ನೀಡುವ ಮಾಹಿತಿಯಂತೆ ನಗರದಲ್ಲಿ 1.5ಲಕ್ಷಕ್ಕೂ ಹೆಚ್ಚು ಕಟ್ಟಡಗಳು ನಿಯಮಗಳನ್ನು ಉಲ್ಲಂಘಿಸಿವೆ ಎಂಬ ಮಾಹಿತಿಯಿದ್ದು, ಈ ಪೈಕಿ ಎಷ್ಟು ಕಟ್ಟಡಗಳು ಸಕ್ರಮಕ್ಕೆ ಅರ್ಹತೆಯನ್ನು ಹೊಂದಿವೆ ಎಷ್ಟು ಕಟ್ಟಡಗಳು ಸಕ್ರಮದ ವ್ಯಾಪ್ತಿಗೆ ಬರುವುದಿಲ್ಲ ಎಂಬುದು ತಿಳಿಯಬೇಕಿದೆ ಎಂಬುದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಪಾಲಿಕೆಗೆ 500-600 ಆದಾಯ ಬರುವುದೇ?:** ಅಕ್ರಮ ಕಟ್ಟಡಗಳು ಸಕ್ರಮ ಮಾಡಿಕೊಳ್ಳುವ ವೇಳೆ ಕಟ್ಟಡ ಮಾಲೀಕರು ಪಾವತಿಸುವ ಶುಲ್ಕದಿಂದಾಗಿ ಪಾಲಿಕೆಗೆ ಕೋಟ್ಯಂತರ ರುಪಾಯಿ ಆದಾಯ ಬರಲಿದೆ. ಸದ್ಯ ಪಾಲಿಕೆಯಲ್ಲಿರುವ ಅಕ್ರಮ ಕಟ್ಟಡಗಳನ್ನು ಸಕ್ರಮ ಮಾಡುವುದರಿಂದ ಪಾಲಿಕೆಗೆ ಅಂದಾಜು ₹500-600 ಕೋಟಿ ಆದಾಯ ಹರಿದು ಬರಲಿದೆ ಎಂದು ಅಂದಾಜು ಮಾಡಲಾಗಿದೆ. ಆದರೆ, ಪಾಲಿಕೆಯಲ್ಲಿ ನಿಯಮ ಮೀರಿದ ಕಟ್ಟಡಗಳ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ನಿರೀಕ್ಷಿಸಿದಷ್ಟು ಆದಾಯ ಪಾಲಿಕೆಯ ಬೊಕ್ಕಸಕ್ಕೆ ಬರಲಿದೆಯೇ ಎಂಬ ಕುತೂಹಲ ಮೂಡಿಸಿದೆ.

**ಪಾಲಿಕೆಯ ಮುಂದಿನ ನಡೆಯೇನು?:** ಸರ್ಕಾರ ತನ್ನ ಅಧಿಸೂಚನೆಯಲ್ಲಿ ನಿಗದಿ ಪಡಿಸಿದ ಉಲ್ಲಂಘನೆಯನ್ನು ಮಾತ್ರ ಸಕ್ರಮಗೊಳಿಸುವುದಾಗಿ ತಿಳಿಸಿರುವ ಬಿಬಿಎಂಪಿ, ಹೆಚ್ಚಿನ ಪ್ರಮಾಣದಲ್ಲಿ ನಿಯಮ ಉಲ್ಲಂಘನೆ ಮಾಡಿರುವವರು ಸ್ವಯಂಪ್ರೇರಿತವಾಗಿ ಕಟ್ಟಡ ತೆರವುಗೊಳಿಸಿ ಸಕ್ರಮಗೊಳಿಸಿಕೊಳ್ಳಲು ಮುಂದಾಗಬೇಕು ಎಂದು ತಿಳಿಸಿದೆ. ಒಂದೊಮ್ಮೆ ಅವರು ಹಾಗೆ ಮಾಡಲು ಮುಂದಾಗಿದಿದ್ದರೆ ಅಥವಾ ಸಕ್ರಮಕ್ಕೆ ಅವಕಾಶವಿದ್ದರೂ ಅರ್ಜಿ ಸಲ್ಲಿಸದಿದ್ದರೆ ಅಂತಹವರಿಗೆ ನೀರು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಪಾಲಿಕೆ ಮುಂದಾಗಿದೆ. ರಸ್ತೆ ಅಗೆತ, ತೆರಿಗೆ ಸಂಗ್ರಹ ಸೇರಿದಂತೆ ಹಲವು ವಿಚಾರದಲ್ಲಿ ಸ್ಥಳೀಯ ಸಂಸ್ಥೆಗಳು ಈವರೆಗೆ ಸಮನ್ವಯ ಸಾಧಿಸಲು ಸಾಧ್ಯವಾಗಿಲ್ಲ. ಅಕ್ರಮ-ಸಕ್ರಮ ವಿಚಾರದಲ್ಲಿ ಬೆಸ್ಕಾಂ ಹಾಗೂ ಜಲಮಂಡಳಿ ಪಾಲಿಕೆಗೆ ಬೆಂಬಲವಾಗಿರುತ್ತವೆ ಎಂಬುದು ಸದ್ಯದ ಪ್ರಶ್ನೆ.

# ರಿಯಲ್ ಎಸ್ಟೇಟ್: 'ಜಿಎಸ್‌ಟಿ ವ್ಯಾಪ್ತಿಗೆ ತನ್ನಿ'

// Page No: 09, ಪ್ರಜಾವಾಣಿ, 16/12/2016

ನವದೆಹಲಿ (ಪಿಟಿಐ): ಭೂಮಿ, ರಿಯಲ್ ಎಸ್ಟೇಟ್, ವಿದ್ಯುತ್ ಕ್ಷೇತ್ರಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ವ್ಯಾಪ್ತಿಗೆ ತರುವಂತೆ ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯನ್ ಅಭಿಪ್ರಾಯಪಟ್ಟಿದ್ದಾರೆ.



ಸುಬ್ರಮಣಿಯನ್

ದೇಶದಾದ್ಯಂತ ಜಾರಿಗೆ ಬರಲಿರುವ ಏಕರೂಪ ತೆರಿಗೆ ವ್ಯವಸ್ಥೆ ಅತ್ಯಂತ ಸರಳ ಮತ್ತು ಹೊರೆಯಾಗದ ರೀತಿ ಇರಬೇಕು ಎಂದು ಅವರು ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ. ರಿಯಲ್ ಎಸ್ಟೇಟ್ ಮತ್ತು ಭೂ ವ್ಯವಹಾರ ವಲಯದಲ್ಲಿ ಹೆಚ್ಚಿರುವ ಕಪ್ಪುಹಣಕ್ಕೆ ಕಡಿವಾಣ ಹಾಕಲು ಈ ಎರಡೂ ಕ್ಷೇತ್ರಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದು ಅಗತ್ಯ ಎಂದರು. ಆದರೆ; ವಿದ್ಯುತ್ ಶುಲ್ಕಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಅಗತ್ಯವಿಲ್ಲ.

'ಹೊಸ ತೆರಿಗೆ ವ್ಯವಸ್ಥೆ ಸರಳ, ಪಾರದರ್ಶಕ ಮತ್ತು ಯಾರಿಗೂ ಹೊರೆಯಾಗದಂತೆ ಸಮತೋಲನದಿಂದ ಕೂಡಿರಬೇಕು. ಕಪ್ಪುಹಣದ ವಿರುದ್ಧದ ಹೋರಾಟಕ್ಕೆ ಇಂಥ ತೆರಿಗೆ ವ್ಯವಸ್ಥೆ ಅಗತ್ಯ' ಎಂದು ಸುಬ್ರಮಣಿಯನ್ ಹೇಳಿದ್ದಾರೆ. //

> **ಜಿಎಸ್‌ಟಿ ಜಾರಿಗೆ ಅನೇಕ ಅಡೆತಡೆಗಳು ಎದುರಾಗುತ್ತಿರುವುದು ನಿಜ. ಆದರೆ, ಆ ಸಮಸ್ಯೆಗಳಿಗೆ ಸರ್ಕಾರ ಪರಿಹಾರಗಳನ್ನು ಕಂಡುಕೊಳ್ಳಲಿದೆ.**
> **– ರಾಜನಾಥ್ ಸಿಂಗ್, ಗೃಹ ಸಚಿವ**

## ಏ.1ರಿಂದಲೇ ಜಿಎಸ್‌ಟಿ ಜಾರಿ: ಕೇಂದ್ರ

ನವದೆಹಲಿ (ಪಿಟಿಐ): ಪೂರ್ವ ನಿಗದಿಯಂತೆ 2017ರ ಏಪ್ರಿಲ್ 1ರಿಂದಲೇ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯನ್ನು ಜಾರಿ ಮಾಡಲಾಗುವುದು ಎಂದು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಹೇಳಿದೆ.

ಎಂತಹ ಅಡೆತಡೆ ಎದುರಾದರೂ ನಿಗದಿತ ದಿನದಂದೇ ದೇಶದಾದ್ಯಂತ ಏಕರೂಪ ತೆರಿಗೆ ವ್ಯವಸ್ಥೆ ಜಾರಿಯಾಗುತ್ತದೆ ಎಂದು ಸಕಲ ಸಿದ್ಧತೆ ನಡೆಸಿದೆ ಎಂದು ಕೇಂದ್ರ ಗೃಹ ಸಚಿವ ರಾಜನಾಥ ಸಿಂಗ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಜಿಎಸ್‌ಟಿ ಜಾರಿಯಾದಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಶೇ 1.75 ರಿಂದ ಶೇ 2ರಷ್ಟು ಏರಿಕೆಯಾಗಲಿದೆ ಎಂದರು.

ಜಾಗತಿಕ ಪ್ರತಿಕೂಲ ವಾತಾವರಣದ ನಡುವೆಯೂ ಭಾರತ ವಿಶ್ವದ ಬಲಾಢ್ಯ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿದೆ. ಇನ್ನೂ 10 ರಿಂದ15 ವರ್ಷಗಳಲ್ಲಿ ವಿಶ್ವದ ಮೂರು ಆರ್ಥಿಕ ಶಕ್ತಿಗಳಲ್ಲಿ ಭಾರತವೂ ಒಂದಾಗಲಿದೆ ಎಂದು ಸಿಂಗ್ ಹೇಳಿದರು.

ಈ ಮಹತ್ವಾಕಾಂಕ್ಷೆಗೆ ಪೂರಕವಾಗಿ ಕೇಂದ್ರ ಸರ್ಕಾರ ಕಾರ್ಯನಿರತವಾಗಿದೆ.

ಅದರೊಂದಿಗೆ ಕಪ್ಪುಹಣದ ವಿರುದ್ಧದ ಸರ್ಕಾರದ ಹೋರಾಟ ನಿರಂತರವಾಗಿರುತ್ತದೆ ಎಂದರು.

---

ವಿಜಯವಾಣಿ

# ರೈಲು ನಿಲ್ದಾಣಗಳಲ್ಲಿ ಶೀಘ್ರ ಎಲ್ಇಡಿ ಬೆಳಕು

## ನೆರವಿಗಾಗಿ ಕೇಂದಕ್ಕೆ ನೈಋತ್ಯ ರೈಲ್ವೆ ಪ್ರಸ್ತಾವನೆ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಪ್ರತಿದಿನ ಸಾವಿರಾರು ಯುನಿಟ್ ವಿದ್ಯುತ್ ಬಳಸಿಕೊಳ್ಳುವ ರೈಲು ನಿಲ್ದಾಣಗಳಲ್ಲಿ ವಿದ್ಯುತ್ ಬಳಕೆ ಮಿತಗೊಳಿಸಲು ನೈಋತ್ಯ ರೈಲ್ವೆ ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ ನೈಋತ್ಯ ರೈಲ್ವೆಯ ಎಲ್ಲ ನಿಲ್ದಾಣಗಳಲ್ಲಿ ಎಲ್ಇಡಿ ಬಲ್ಬ್‌ಗಳನ್ನು ಅಳವಡಿಸಲು ಹಣಕಾಸಿನ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂಬರುವ ಬಜೆಟ್‌ನಲ್ಲಿ ಈ ಪ್ರಸ್ತಾವನೆಗೆ ಮನ್ನಣೆ ಸಿಗುವ ಸಾಧ್ಯತೆಯಿದ್ದು, ಈ ಮೂಲಕ ನಿಲ್ದಾಣಗಳಲ್ಲಿನ ವಿದ್ಯುತ್ ಬಳಕೆ ಶೇ.50 ಇಳಿಕೆಯಾಗುವ ಸಾಧ್ಯತೆಯಿದೆ.



» **ವಿದ್ಯುತ್ ಬಳಕೆ ಶೇ.50 ಇಳಿಕೆಯಾಗುವ ಸಾಧ್ಯತೆ**

ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಗುರುವಾರ 'ವಿದ್ಯುತ್ ಉಳಿತಾಯ' ಸಂಬಂಧಿಸಿದಂತೆ ಕಾರ್ಯಾಗಾರ ನಡೆಯಿತು. ಬೆಂಗಳೂರು ವಿಭಾಗದ ಹಿರಿಯ ಎಲೆಕ್ಟ್ರಿಕಲ್ ಇಂಜಿನಿಯರ್ ಪಿ.ಎಸ್. ಗುಪ್ತಾ ಮಾತನಾಡಿ, ಭಾರತ ವಿಶ್ವದ 4ನೇ ಅತ್ಯಧಿಕ ವಿದ್ಯುತ್ ಬಳಕೆದಾರ ರಾಷ್ಟ್ರವಾಗಿದೆ. ನಿಯಮಿತ ವಿದ್ಯುತ್ ಬಳಕೆ ಬಗ್ಗೆ ಇಲಾಖೆಯ ಎಲ್ಲರೂ ಗಮನಹರಿಸಬೇಕು. ಹೀಗಾಗಿ ಬೆಂಗಳೂರು ವಿಭಾಗದ 10 ಸಣ್ಣ ರೈಲು ನಿಲ್ದಾಣಗಳಲ್ಲಿ ಈಗಾಗಲೇ ಎಲ್ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಮಾರ್ಚ್ ಒಳಗೆ ಬೈಯಪ್ಪನಹಳ್ಳಿ ಸೇರಿ ಈ ಮಾರ್ಗದಲ್ಲಿ ಬರುವ ಇನ್ನೂ 10 ನಿಲ್ದಾಣಗಳನ್ನು ಎಲ್ಇಡಿ ಬಲ್ಬ್ ಹೊಂದಿದ ನಿಲ್ದಾಣಗಳನ್ನಾಗಿ ಪರಿವರ್ತನೆಗೊಳಿಸಲಾಗುವುದು ಎಂದು ತಿಳಿಸಿದರು.

ಬೆಂಗಳೂರು ವಿಭಾಗ ಹೆಚ್ಚುವರಿ ರೈಲ್ವೆ ವ್ಯವಸ್ಥಾಪಕಿ ಅಪರ್ಣಾ ಗರ್ಗ್ ಮಾತನಾಡಿ, ವಿದ್ಯುತ್ ಉಳಿತಾಯ ವಿಚಾರಕ್ಕೆ ಸಂಬಂಧಿಸಿದಂತೆ ಇಲಾಖೆಯ ಎಲೆಕ್ಟ್ರಿಕಲ್ ವಿಭಾಗ ಹೊಸ ಉಪಾಯ ಹಾಗೂ ವಿನ್ಯಾಸಗಳೊಂದಿಗೆ ಬರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಡಿ.14ರಿಂದ ಡಿ.21ರವರೆಗೆ ವಿದ್ಯುತ್ ಉಳಿತಾಯ ಸಪ್ತಾಹವನ್ನಾಗಿ ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗ ಆಚರಿಸುತ್ತಿದೆ.

> **ನೈಋತ್ಯ ರೈಲ್ವೆಯ ಎಲ್ಲ ನಿಲ್ದಾಣಗಳಲ್ಲಿ ಎಲ್ಇಡಿ ಬಲ್ಬ್ ಅಳವಡಿಕೆ [illegible] ಕೇಂದ್ರ ಸರ್ಕಾರಕ್ಕೆ [illegible] ಪ್ರಸ್ತಾವನೆ ಸಲ್ಲಿಸಲಾಗಿದೆ. [illegible] ರೈಲು ನಿಲ್ದಾಣಗಳನ್ನು ಸಂಪೂರ್ಣ ಎಲ್ಇಡಿ ನಿಲ್ದಾಣಗಳನ್ನಾಗಿ ಪರಿವರ್ತಿಸಲು [illegible] ವೆಚ್ಚವಾಗಲಿದೆ.**
> **। ಪಿ.ಎಸ್. ಗುಪ್ತಾ ನೈಋತ್ಯ ರೈಲ್ವೆ ಹಿರಿಯ ಎಲೆಕ್ಟ್ರಿಕಲ್ ಇಂಜಿನಿಯರ್**

---

// Page No: 08, ಪ್ರಜಾವಾಣಿ, 16/12/2016

## ಸೌರಶಕ್ತಿ ಯೋಜನೆಗೆ ₹ 30 ಕೋಟಿ

ನವದೆಹಲಿ (ಪಿಟಿಐ): ಸೌರಶಕ್ತಿ ನಗರ (ಸೋಲಾರ್ ಸಿಟಿ) ಯೋಜನೆ ಜಾರಿಗೆ ಕೇಂದ್ರ ಸರ್ಕಾರ ಕಳೆದ ಮೂರು ವರ್ಷಗಳ ಅವಧಿಯಲ್ಲಿ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ₹ 30 ಕೋಟಿ ಮಂಜೂರು ಮಾಡಿದೆ.

'ಒಟ್ಟು ಮಂಜೂರು ಆಗಿರುವ ₹ 30.36 ಕೋಟಿ ಮೊತ್ತದಲ್ಲಿ ₹ 12.98 ಕೋಟಿ ಹಣ ಈಗಾಗಲೇ ಬಿಡುಗಡೆಯಾಗಿದೆ' ಎಂದು ಕೇಂದ್ರ ಇಂಧನ ಸಚಿವ ಪೀಯೂಷ್ ಗೋಯಲ್ ಗುರುವಾರ ಲೋಕಸಭೆಗೆ ತಿಳಿಸಿದರು.

ಕರ್ನಾಟಕದ ಮೈಸೂರು ಸೇರಿದಂತೆ ಒಟ್ಟು 60 ನಗರಗಳು ಕೇಂದ್ರ ಸರ್ಕಾರದ 'ಸೌರಶಕ್ತಿ ನಗರ ಅಭಿವೃದ್ಧಿ ಯೋಜನೆ'ಯಲ್ಲಿ ಸ್ಥಾನ ಪಡೆದಿವೆ. ಪ್ರತಿ ರಾಜ್ಯದ ಕನಿಷ್ಠ ಒಂದು ನಗರವನ್ನು ಈ ಯೋಜನೆಯಡಿ ಸೇರಿಸಲಾಗುವುದು ಎಂದು ಗೋಯಲ್ ಹೇಳಿದರು. //

